**Anti Land-Grabbing Action Committee**
**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ**
No. 759, 5th Main, 8th Cross, R.T.Nagar, II Block, Bangalore 560032 Ph: 094481 20305
Website : http://savekarnataka.in email: karnatakasave@gmail.com

3/11/2014

ಗೆ,
ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಕರ್ನಾಟಕ ಸರ್ಕಾರ, ಬೆಂಗಳೂರು.

ಮಾನ್ಯರೆ,

ವಿಷಯ: ಭೂಕಂದಾಯ ಕಾಯಿದೆ ಕಲಂ 136(3) ರ ಅಡಿಯಲ್ಲಿ ಪತ್ತೆ ಹಚ್ಚಿರುವ ಪ್ರಕರಣಗಳ ವಿವರಗಳನ್ನು . ಒದಗಿಸುವ ಬಗ್ಗೆ.

ಶ್ರೀ ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ೨೦೧೧ರ ವರದಿಯಲ್ಲಿ ಭೂಕಬಳಿಕೆಯ (ಸರ್ಕಾರಿ ಜಮೀನಿಗೆ ಸುಳ್ಳು ದಾಖಲೆ ಸೃಷ್ಟಿಸಿ) ಕೆಲವೇ ಕೆಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಲಾಗಿತ್ತು. ಅಂತಹ ಸಾವಿರಾರು ಪ್ರಕರಣಗಳಿದ್ದು, ಸರ್ಕಾರಿ ಭೂಮಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಹಕ್ಕು ಸ್ಥಾಪಿಸಿಕೊಂಡಿರುವ ಪ್ರಕರಣಗಳನ್ನು ಪತ್ತೆ ಹಚ್ಚುವುದು ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಒಂದು ದೊಡ್ಡ ಸವಾಲಾಗಿದೆ. ಈ ದಿಕ್ಕಿನಲ್ಲಿ ಕೈಗೊಂಡಿರುವ ಕ್ರಮಗಳು ನಿಧಾನ ಗತಿಯಲ್ಲಿ ಸಾಗಿರುವುದರಿಂದ ಸಾವಿರಾರು ಎಕರೆ ಸರ್ಕಾರಿ ಭೂಮಿ ಇನ್ನೂ ಭೂಗಳ್ಳರ ವಶದಲ್ಲಿದೆ ಮತ್ತು ವರದಿ ಕೊಟ್ಟ ನಂತರವೂ ಸಹ ಕಂದಾಯ ಇಲಾಖೆ ಶಾಮೀಲಿನಿಂದಾಗಿ ವ್ಯವಸ್ಥಿತವಾಗಿ ನಿರ್ಭೀತಿಯಿಂದ ಭೂಕಬಳಿಕೆ ಮುಂದುವರೆಯುತ್ತಿರುವುದು ಗಂಭೀರ ಸಂಗತಿಯಾಗಿರುತ್ತದೆ. ಮಾಧ್ಯಮಗಳಲ್ಲಿ ಜಾಹೀರಾತು ನೀಡಿ ಭೂಗಳ್ಳರು ಅಮಾಯಕ ಜನರನ್ನು ವಂಚಿಸುತ್ತಿರುವ ಪ್ರಕರಣಗಳು ಈಗಲೂ ನಡೆಯುತ್ತಿದೆ. ಸರ್ಕಾರಿ ಅಧಿಕಾರಿಗಳು ಸರಿಯಾದ ಅಂಕಿ ಅಂಶಗಳು ಮತ್ತು ಅವುಗಳ ವಿವರಣೆಗಳನ್ನು ಪ್ರಕಟ ಮಾಡದೇ ಇರುವ ಕಾರಣ ಭೂಗಳ್ಳರ ಹಾಗೂ ಅವರ ಜೊತೆ ಶಾಮೀಲಾದ ಅಧಿಕಾರಿಗಳ ಮೇಲೆ ಸರಿಯಾದ ಕ್ರಮಗಳಿಗೆ ಒತ್ತಾಯಿಸಲು ಸಾಧ್ಯವಾಗುತ್ತಿಲ್ಲ. ಈ ವಿಷಯಗಳಿಗೆ ಸಂಬಂಧಿಸಿದಂತೆ ಭೂಕಬಳಿಕೆ ವಿರೋಧಿ ಹೋರಾಟ ಸಮಿತಿಯು ಈ ಮೊದಲೇ ಕೋರಿರುವ ಯಾವುದೇ ಮಾಹಿತಿಗಳನ್ನು ನೆಪವೊಂದು ಕೊಟ್ಟು ಮೇಲೂ ಸಹ ಒದಗಿಸದೇ ಇರುವುದು ಕಂದಾಯ ಇಲಾಖೆಯೇ ಭೂಗಳ್ಳತನಕ್ಕೆ ಪ್ರೋತ್ಸಾಹ ನೀಡಿ ಅವರ ರಕ್ಷಣೆಗೆ ನಿಂತಿರುವುದು ಎದ್ದು ಕಾಣುತ್ತದೆ. ಮಾಹಿತಿಗಳನ್ನು ಗೌಪ್ಯವಾಗಿಟ್ಟು ಸರ್ಕಾರಿ ಅಧಿಕಾರಿಗಳು ಒಬ್ಬರನ್ನೊಬ್ಬರು ರಕ್ಷಿಸಿಕೊಳ್ಳುತ್ತಿರುವುದು ದುರದೃಷ್ಟಕರ. ಆದ್ದರಿಂದ ಸರ್ಕಾರ ಹೆಚ್ಚು ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸಿ ಸಾರ್ವಜನಿಕವಾಗಿ ಮಾಹಿತಿಗಳನ್ನು ಪ್ರಕಟಿಸಿದ್ದಲ್ಲಿ ಭೂಕಬಳಿಕೆ ಎಂಬ ಬೃಹದಾಕಾರದ ಸಮಸ್ಯೆಯನ್ನು ಎಲ್ಲರೂ ಸೇರಿ ಬಗೆಹರಿಸಲು ಸಾಧ್ಯವಾಗುತ್ತದೆ.

ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ದಿನಾಂಕ 30/6/2012 ರಂದು ಸನ್ಮಾನ್ಯ ಉಪಮುಖ್ಯಮಂತ್ರಿಯವರಾಗಿದ್ದ ಶ್ರೀ. ಕೆ.ಎಸ್. ಈಶ್ವರಪ್ಪರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶ್ರೀ. ಎ.ಟಿ. ರಾಮಸ್ವಾಮಿಯವರ

ಅಧ್ಯಕ್ಷತೆಯಲ್ಲಿ ರಚಿಸಲಾದ ಜಂಟಿ ಸದನ ಸಮಿತಿಯ ಮಧ್ಯಂತರ ವರದಿಯಲ್ಲಿ ಗಮನಿಸಿರುವ ಅಂಶಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಪ್ರಸ್ತಾಪಿಸಲಾಗಿತ್ತು. ಆ ಸಭೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಒಂದರಲ್ಲಿಯೇ 29/8/2012ರವರೆಗೆ ಭೂಕಂದಾಯ ಕಾಯಿದೆ ಕಲಂ 136(3) ರ ಅಡಿಯಲ್ಲಿ ಪತ್ತೆ ಹಚ್ಚಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣ 10956 ಎಕರೆ 1 ಗುಂಟೆ ಎಂದು ತಿಳಿಸಲಾಗಿತ್ತು. ಈ ಒಟ್ಟು ವಿಸ್ತೀರ್ಣದ ಬಗ್ಗೆ ಈ ಕೆಳಕಂಡಂತೆ ಮಾಹಿತಿ ಒದಗಿಸಬೇಕಾಗಿ ಕೋರುತ್ತೇನೆ.

1. ಸರ್ಕಾರದ ಪರ ವಿಲೇ ಆಗಿರುವ ಒಟ್ಟು ವಿಸ್ತೀರ್ಣ 3083 ಎಕರೆ 17 ಗುಂಟೆ - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ.

2. ಕೈಬಿಟ್ಟಿರುವ ಅಂದರೆ ಸರ್ಕಾರದ ವಿರುದ್ಧವಾಗಿ ಆದೇಶವಾಗಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣ 3614 ಎಕರೆ 39 ಗುಂಟೆ - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ.

3. ದಿನಾಂಕ 30/8/2012 ರಂದು ಬಾಕಿ ಉಳಿದಿದ್ದ ಪ್ರಕರಣಗಳ ಒಟ್ಟು ವಿಸ್ತೀರ್ಣ 4257 ಎಕರೆ 25 ಗುಂಟೆ - . ಇದರ ಪೈಕಿ:

   ಅ. ಸರ್ಕಾರದ ಪರ ವಿಲೇ ಆಗಿರುವ ಪ್ರಕರಣಗಳು - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ.

   ಆ. ಕೈಬಿಟ್ಟಿರುವ ಅಂದರೆ ಸರ್ಕಾರದ ವಿರುದ್ಧವಾಗಿ ಆದೇಶವಾಗಿರುವ ಪ್ರಕರಣಗಳು - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ

   ಇ. ಇಂದಿನ ದಿನದವರೆಗೂ ಇನ್ನೂ ಬಾಕಿ ಉಳಿದಿರುವ ಪ್ರಕರಣಗಳು - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ

**ಇದಲ್ಲದೆ, 30/8/2012 ಇಂದ ಇಲ್ಲಿಯವರೆಗೆ ಭೂಕಂದಾಯ ಕಾಯಿದೆ ಕಲಂ 136(3) ರ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಹೊಸದಾಗಿ ಪತ್ತೆ ಹಚ್ಚಲಾಗಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣವನ್ನು ಒದಗಿಸುವುದು. ಇದರ ಪೈಕಿ ಸರ್ಕಾರದ ಪರ ವಿಲೇ ಆಗಿರುವ ಒಟ್ಟು ವಿಸ್ತೀರ್ಣ, ಸರ್ಕಾರದ ವಿರುದ್ಧವಾಗಿ ಆದೇಶವಾಗಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣ ಮತ್ತು ಬಾಕಿ ಉಳಿದಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣದ ವಿವರಗಳನ್ನೂ ಒದಗಿಸುವುದು. ಇವುಗಳಲ್ಲಿ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರಗಳನ್ನು ಒದಗಿಸುವುದು.**

**ಅದೇ ಮಾದರಿಯಲ್ಲಿ ರಾಜ್ಯಾದ್ಯಂತ ಪ್ರತೀ ಜಿಲ್ಲೆಗೆ ಸಂಬಂಧಿಸಿದಂತೆ ಭೂಕಂದಾಯ ಕಾಯಿದೆ ಕಲಂ 136(3) ರ ಅಡಿಯಲ್ಲಿ ಪತ್ತೆ ಹಚ್ಚಲಾಗಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣವನ್ನು ಒದಗಿಸುವುದು. ಇದರ ಪೈಕಿ ಸರ್ಕಾರದ ಪರ ವಿಲೇ ಆಗಿರುವ ಒಟ್ಟು ವಿಸ್ತೀರ್ಣ, ಸರ್ಕಾರದ ವಿರುದ್ಧವಾಗಿ ಆದೇಶವಾಗಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣ ಮತ್ತು ಬಾಕಿ ಉಳಿದಿರುವ ಪ್ರಕರಣಗಳ ಒಟ್ಟು ವಿಸ್ತೀರ್ಣದ ವಿವರಗಳನ್ನೂ ಒದಗಿಸುವುದು. ಇವುಗಳಲ್ಲಿ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ , ತಾಲೂಕು ಮತ್ತು ಜಿಲ್ಲೆಯ ವಿವರಗಳನ್ನು ಒದಗಿಸುವುದು.**

. ಬಹು ಮುಖ್ಯವಾಗಿ ಅಮಾಯಕ ಜನರು ಸರ್ಕಾರದ ಇಲಾಖೆಗಳೇ ಸೃಷ್ಟಿಸಿರುವ ನಕಲೀ ದಾಖಲೆಗಳಿಂದ ಮೋಸಹೋಗಿ, ಜೀವಮಾನವಿಡೀ ದುಡಿದು ಕೂಡಿಟ್ಟ ಹಣವನ್ನು ಕಳೆದುಕೊಳ್ಳುವುದನ್ನು ಇನ್ನು ಮುಂದೆಯಾದರೂ ತಪ್ಪಿಸಲು ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಸರ್ಕಾರಕ್ಕೆ ಸೇರಿದ ಜಾಗಗಳನ್ನು ರಕ್ಷಿಸಬೇಕಾದ ನೇರವಾದ ಜವಾಬ್ದಾರಿ ಹೊಂದಿರುವ ಕಂದಾಯ ಇಲಾಖೆಯ ಮುಖ್ಯಸ್ಥರಾದ ತಮಗೆ ಈ ರೀತಿ ಪತ್ರ ಪದೇ ಪದೇ ಬರೆಯಬೇಕಾಗಿರುವುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿರುತ್ತದೆ.

ಈ ಪತ್ರವನ್ನು ಮತ್ತು ನೀವು ಒದಗಿಸುವ ಮಾಹಿತಿಗಳನ್ನು ಸಾರ್ವಜನಿಕರಿಗೆ/ಮಾಧ್ಯಮಗಳಿಗೆ ನೇರವಾಗಿ ತಿಳಿಸಲು http://savekarnataka.in ನಲ್ಲಿ ಹಾಕಲಾಗುವುದು. ಪರಿಸ್ಥಿತಿಯ ಗಂಭೀರತೆಯನ್ನು ಅರಿತು ನಾವು ಕೇಳಿರುವ ಮಾಹಿತಿಗಳನ್ನು ಕೂಡಲೇ ಒದಗಿಸಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ.

ವಂದನೆಗಳೊಂದಿಗೆ,

**ತಮ್ಮ ವಿಶ್ವಾಸಿ,**

**(ಎ.ಟಿ.ರಾಮಸ್ವಾಮಿ)**

**ಸಂಚಾಲಕರು, ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ**

ಪ್ರತಿ,

**ಶ್ರೀ. ಕೌಶಿಕ್ ಮುಖರ್ಜಿ**, ಐ.ಎ ಎಸ್. ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು - ಮೇಲೆ ತಿಳಿಸಿದಂತೆ ಮಾಹಿತಿಗಳನ್ನು ಕೋರಿ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ವಿವಿಧ ಇಲಾಖಾ ಮುಖ್ಯಸ್ಥರುಗಳಿಗೆ ನೆನಪೋಲೆ ಬರೆದರೂ ಇಲ್ಲಿಯವರೆಗೂ ಕಂದಾಯ ಇಲಾಖೆ ಹೊರತುಪಡಿಸಿ (ಅಪೂರ್ಣ ಮಾಹಿತಿ ಒದಗಿಸಲಾಗಿದೆ) ಬೇರೆ ಯಾವುದೇ ಇಲಾಖೆಯಿಂದ ಮಾಹಿತಿ ಒದಗಿಸದೇ ಇರುವುದು ಇಡೀ ಆಡಳಿತ ಯಂತ್ರವೇ ಭೂಗಳ್ಳರ ನಿಯಂತ್ರಣದಲ್ಲಿರುವುದು ಸ್ಪಷ್ಟವಾಗುತ್ತದೆ. ಮುಖ್ಯ ಕಾರ್ಯದರ್ಶಿಗಳು ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ ಕೋರಿರುವ ಮಾಹಿತಿಗಳನ್ನು ಶೀಘ್ರದಲ್ಲೇ ಕೊಡುವುದು ಮತ್ತು ಕೂಡಲೇ ಮಾಹಿತಿಗಳನ್ನು ಒದಗಿಸಬೇಕೆಂದು ವಿವಿಧ ಇಲಾಖಾ ಮುಖ್ಯಸ್ಥರುಗಳಿಗೆ ನಿರ್ದೇಶನ ನೀಡಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ.

## Anti Land-Grabbing Action Committee
## ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

No. 759, 5th Main, 8th Cross, R.T.Nagar, II Block, Bangalore 560032 Ph: 094481 20305
Website : http://savekarnataka.in email: karnatakasave@gmail.com


6/11/2014

ಗೆ,

ಪ್ರಧಾನ ಕಾರ್ಯದರ್ಶಿಗಳು,

ಕಂದಾಯ ಇಲಾಖೆ,

ಕರ್ನಾಟಕ ಸರ್ಕಾರ, ಬೆಂಗಳೂರು.

ಮಾನ್ಯರೆ,

ವಿಷಯ: ಇನಾಂ ರದ್ದತಿ ಅಧಿನಿಯಮ, ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಅಧಿನಿಯಮ ಹಾಗೂ ಭೂಸುಧಾರಣಾ ಅಧಿನಿಯಮ - ಇವುಗಳ ಅಡಿಯಲ್ಲಿ ಪತ್ತೆ ಹಚ್ಚಲಾಗಿರುವ ಭೂಒತ್ತುವರಿ/ಕಬಳಿಕೆ ಪ್ರಕರಣಗಳ ವಿವರಗಳನ್ನು ಒದಗಿಸುವ ಬಗ್ಗೆ.

ಶ್ರೀ ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ 2007ರ ಎರಡನೇ ವರದಿಯಲ್ಲಿ ಇನಾಂ ರದ್ದತಿ ಅಧಿನಿಯಮ, ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಅಧಿನಿಯಮ ಹಾಗೂ ಭೂಸುಧಾರಣಾ ಅಧಿನಿಯಮ ( ಕಲಂ 79(A) ಮತ್ತು 79(B)) ಮುಂತಾದವುಗಳ ಅಡಿಯಲ್ಲೂ ಸಹ ಬೆಂಗಳೂರು/ಬೆಂಗಳೂರು ನಗರ ಜಿಲ್ಲೆಯಲ್ಲಿ ಭೂ ಒತ್ತುವರಿ/ಕಬಳಿಕೆ ಆಗಿರುವ ವಿಷಯವನ್ನು ಪ್ರಸ್ತಾಪಿಸಲಾಗಿತ್ತು. ಆಗ ಕಂದಾಯ ಇಲಾಖೆಯು, ಮೇಲೆ ಹೇಳಿರುವ ವಿಷಯಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಇನ್ನೂ ಸಂಗ್ರಹಿಸಿಲ್ಲ, ಮುಂದೆ ಸಂಗ್ರಹಿಸಬೇಕಾಗುತ್ತದೆ ಎಂದು ಸಮಿತಿಗೆ ತಿಳಿಸಿತ್ತು. ಆದರೆ ವಿಧಾನ ಸಭೆ ವಿಸರ್ಜನೆಯಾಗಿ ಜಂಟಿ ಸದನ ಸಮಿತಿಯು 3ನೇ ವರದಿಯ ಸಾರಾಂಶ ಸಲ್ಲಿಸುವ ಸಂದರ್ಭದಲ್ಲೂ ಕಂದಾಯ ಇಲಾಖೆಯು ಮಾಹಿತಿಗಳನ್ನು ಸಂಗ್ರಹಿಸಿ ಕೊಟ್ಟಿರಲಿಲ್ಲ. ಆದರೆ ಈಗ , ಏಳು ವರ್ಷದ ನಂತರ ಬೆಂಗಳೂರು/ಬೆಂಗಳೂರು ನಗರ ಜಿಲ್ಲೆಯಷ್ಟೇ ಅಲ್ಲದೇ ರಾಜ್ಯಾದ್ಯಂತ ಮೇಲೆ ಪ್ರಸ್ತಾಪಿಸಿರುವ ಅಧಿನಿಯಮಗಳ ಅಡಿಯಲ್ಲಿ ಭೂ ಒತ್ತುವರಿ/ಕಬಳಿಕೆ ಪ್ರಕರಣಗಳ ಮಾಹಿತಿಗಳು ಕಂದಾಯ ಇಲಾಖೆಯಲ್ಲಿ ಲಭ್ಯವಿರುತ್ತದೆ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ಈ ಕೆಳಕಂಡ ಮಾಹಿತಿಗಳನ್ನು ಕೂಡಲೇ ಒದಗಿಸುವುದು.

1. ಅ. ಇನಾಂ ರದ್ದತಿ ಅಧಿನಿಯಮದ ಅಡಿಯಲ್ಲಿ ಬೆಂಗಳೂರು/ಬೆಂಗಳೂರು ನಗರ ಜಿಲ್ಲೆಯಲ್ಲಿ ಪತ್ತೆ ಹಚ್ಚಲಾಗಿರುವ ಭೂಒತ್ತುವರಿ/ಕಬಳಿಕೆ ಪ್ರಕರಣಗಳ ವಿವರಗಳನ್ನು ಒದಗಿಸುವುದು - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ.

   ಆ. ಇನಾಂ ರದ್ದತಿ ಅಧಿನಿಯಮದ ಅಡಿಯಲ್ಲಿ ರಾಜ್ಯಾದ್ಯಂತ ಪತ್ತೆ ಹಚ್ಚಲಾಗಿರುವ ಭೂಒತ್ತುವರಿ/ಕಬಳಿಕೆ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಒದಗಿಸುವುದು. - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ

2. ಅ. ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಅಧಿನಿಯಮದ ಅಡಿಯಲ್ಲಿ ಬೆಂಗಳೂರು/ಬೆಂಗಳೂರು ನಗರ ಜಿಲ್ಲೆಯಲ್ಲಿ ವಶ ಪಡಿಸಲಾಗಿರುವ ಭೂ ಒತ್ತುವರಿ/ಕಬಳಿಕೆ ಪ್ರಕರಣಗಳ ವಿವರಗಳನ್ನು ಒದಗಿಸುವುದು - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ

ಆ. ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಅಧಿನಿಯಮ ಅಡಿಯಲ್ಲಿ ರಾಜ್ಯಾದ್ಯಂತ ವಶ ಪಡಿಸಲಾಗಿರುವ ಭೂ ಒತ್ತುವರಿ/ಕಬಳಿಕೆ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಒದಗಿಸುವುದು. - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ ಸರ್ವೇ ನಂ, ಗ್ರಾಮ, ಹೋಬಳಿ, ತಾಲೂಕು ಮತ್ತು ಜಿಲ್ಲೆಗಳ ವಿವರ.

3. ಅ. ಭೂಸುಧಾರಣಾ ಅಧಿನಿಯಮದ ಕಲಂ 79(A) ಮತ್ತು 79(B)ರ ಅಡಿಯಲ್ಲಿ ಬೆಂಗಳೂರು/ಬೆಂಗಳೂರು ನಗರ ಜಿಲ್ಲೆಯಲ್ಲಿ ವಶ ಪಡಿಸಲಾಗಿರುವ ಭೂ ಒತ್ತುವರಿ/ಕಬಳಿಕೆ ಪ್ರಕರಣಗಳ ವಿವರಗಳನ್ನು ಒದಗಿಸುವುದು - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ, ಸರ್ವೇ ನಂ, ಗ್ರಾಮ, ಹೋಬಳಿ ಮತ್ತು ತಾಲೂಕುಗಳ ವಿವರ.

ಆ. ಭೂಸುಧಾರಣಾ ಅಧಿನಿಯಮದ ಕಲಂ 79(A) ಮತ್ತು 79(B)ರ ಅಡಿಯಲ್ಲಿ ರಾಜ್ಯಾದ್ಯಂತ ವಶ ಪಡಿಸಲಾಗಿರುವ ಭೂ ಒತ್ತುವರಿ/ಕಬಳಿಕೆ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಒದಗಿಸುವುದು. - ಇದರ ಪ್ರತೀ ಪ್ರಕರಣದಲ್ಲಿನ ಹೆಸರು, ವಿಳಾಸ, ವಿಸ್ತೀರ್ಣ ಸರ್ವೇ ನಂ, ಗ್ರಾಮ, ಹೋಬಳಿ, ತಾಲೂಕು ಮತ್ತು ಜಿಲ್ಲೆಗಳ ವಿವರ.

ಮೇಲೆ ಕೇಳಿರುವ ಮಾಹಿತಿಗಳನ್ನು ಅತೀ ಶೀಘ್ರದಲ್ಲಿ ಒದಗಿಸಬೇಕೆಂದು ಕೋರುತ್ತೇವೆ. ಈ ಪತ್ರವನ್ನು ಮತ್ತು ನೀವು ಒದಗಿಸುವ ಮಾಹಿತಿಗಳನ್ನು ಸಾರ್ವಜನಿಕರಿಗೆ/ಮಾಧ್ಯಮಗಳಿಗೆ ನೇರವಾಗಿ ತಿಳಿಸಲು http://savekarnataka.in ನಲ್ಲಿ ಹಾಕಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ.ಟಿ.ರಾಮಸ್ವಾಮಿ)
ಸಂಚಾಲಕರು, ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

**ಯಥಾ ಪ್ರತಿಯನ್ನು ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ, ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಅಧಿನಿಯಮದ ಅಡಿಯಲ್ಲಿ ಕೇಳಿರುವ ಮೇಲ್ಕಂಡ ಮಾಹಿತಿಯನ್ನು ಒದಗಿಸಬೇಕಾಗಿ ಕೋರಿ ಸಲ್ಲಿಸಿದೆ.**